ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ಇವರ ನ್ಯಾಯಾಲಯ, ಮೂಡಿಗೆರೆ.

ಸಿ.ಸಿ. ಸಂಖ್ಯೆ.**28/2022**

| | | |
|---|---|---|
| ಸಾಕ್ಷಿದಾರರ ಹೆಸರು | ಕೆ.ಎಸ್. ಸುರೇಶ್ | ಸಿ.ಡಬ್ಲ್ಯೂ: 5 ಪಿ.ಡಬ್ಲ್ಯೂ: 7 |
| ತಂದೆಯ ಹೆಸರು | ಸುಬ್ಬೇಗೌಡ | |
| ವಯಸ್ಸು | 69 ವರ್ಷ | |
| ಉದ್ಯೋಗ | ವ್ಯವಸಾಯ | |
| ವಾಸ ಸ್ಥಳ | ಬಸ್ಕಿ ಗ್ರಾಮ, ಮೂಡಿಗೆರೆ ತಾ: | |

ದಿನಾಂಕ: 07.11.2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಮುಖ್ಯ ವಿಚಾರಣೆ ಮಾನ್ಯ **ಸ.ಸ.ಅ.** ರವರಿಂದ (ಭಾರತೀಯ ದಂಡ ಪ್ರಕ್ರಿಯಾ ಸಂಹಿತೆ ಕಲಂ 299 ರಡಿಯಲ್ಲಿ ಸಾಕ್ಷಿ ವಿಚಾರಣೆ )

1. ನನಗೆ 2 ಮತ್ತು 3 ನೇ ಆರೋಪಿತರ ಪರಿಚಯ ಇಲ್ಲ. ಚಾಸಾ.1 ಮತ್ತು 6 ರವರ ಪರಿಚಯ ನನಗೆ ಇರುತ್ತದೆ. ನಾನು ಈಗ ನೋಡುತ್ತಿರುವ ದಾಖಲೆಯ ಮೇಲೆ ನನ್ನ ಸಹಿ ಇರುತ್ತದೆ. ಸದರಿ ದಾಖಲೆ ಸ್ಥಳ ಮಹಜರ್ ಆಗಿದ್ದು, ಅದನ್ನು ಈಗಾಗಲೇ ನಿ.ಪಿ.10 ಎಂದು ಗುರುತಿಸಲಾಗಿರುತ್ತದೆ. ಸದರಿ ದಾಖಲೆಗೆ ಸಹಿಯನ್ನು 7 ರಿಂದ 8 ವರ್ಷದ ಹಿಂದೆ ಬಸ್ಕಿ ಗ್ರಾಮದ ರಸ್ತೆಯ ಬದಿಯಲ್ಲಿ ಕಳ್ಳತನದ ವಿಚಾರದಲ್ಲಿ ಮಾಡಿದ್ದೆ. ಸದರಿ ದಾಖಲೆಗೆ ಬಣಕಲ್ ಪೊಲೀಸರು ಸಹಿ ಮಾಡಬೇಕು ಎಂದು ಹೇಳಿದ ಕಾರಣ ಸಹಿ ಮಾಡಿದ್ದೆ. ಸಹಿ ಮಾಡಿದ ಸಮಯ ನೆನಪಿಲ್ಲ. ನಾನು ಸಹಿ ಮಾಡುವಾಗ ಬೇರೆ ಯಾರು ಇರಲಿಲ್ಲ. ಸದರಿ ದಾಖಲೆಯಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಮಾನ್ಯ ಸ.ಸ.ಅ. ರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಿದೆ)

**ಪಾಟೀ ಸವಾಲು ಸ.ಸ.ಅ. ರವರಿಂದ**

2. ದಿ: 27.08.2015 ರಂದು ನಾನು ನಿ.ಪಿ.10 ದಾಖಲೆಗೆ ಸಹಿ ಮಾಡಿರುತ್ತೇನೆ ಎಂದರೆ ಸರಿ. ನಾನು ಸದರಿ ಸಹಿಯನ್ನು ಚಾಸಾ.1 ರವರ ಹಳೆಯ ಮನೆಯ

ಹಿಂಭಾಗದ ರೂಮ್ ನಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಗಳು ಚಾಸಾ.1 ರವರ ಮನೆಯಲ್ಲಿ ಕಳ್ಳತನ ಮಾಡಿರುವ ಬಗ್ಗೆ ಚಾಸಾ.1 ರವರು ಮಹಜರ್ ಕಾಲದಲ್ಲಿ ಪೊಲೀಸರಿಗೆ ನನ್ನ ಸಮಕ್ಷಮ ಸ್ಥಳವನ್ನು ತೋರಿಸಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಪೊಲೀಸರು ಕಬ್ಬಿಣದ ಬೀಗವನ್ನು ಅಮಾನತ್ತು ಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಈ ಪ್ರಕರಣ ಎಲ್ಲಾ ವಿಚಾರಗಳು ಗೊತ್ತಿದ್ದರು ಆರೋಪಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.

ಸಾಕ್ಷಿಯ ಸಹಿ

ಮಾ